11

# ಹೊಸ ಒಡಂಬಡಿಕೆ – ಒಂದು ನೂತನ ನಿಯಮ

*"ಹಾಗೆಯೇ ನನ್ನ ಸಹೋದರರೇ, ನೀವು ಸಹ ಕ್ರಿಸ್ತನ ದೇಹದ ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ದೇವರಿಗೆ ಫಲವಾಗುವದಕ್ಕಾಗಿ ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತನಾಗಿ ಎದ್ದಾತನನ್ನು ಸೇರಿಕೊಂಡಿರಿ. ನಾವು ಶರೀರಾಧೀನ ಸ್ವಭಾವವನ್ನು ಅನುಸರಿಸುತ್ತಿದ್ದಾಗ ದುರಾಶೆಗಳು ಧರ್ಮ ಶಾಸ್ತ್ರದಿಂದಲೇ ಪ್ರೇರಿತವಾಗಿ ನಮ್ಮ ಅಂಗಗಳಲ್ಲಿ ಯತ್ನೈಸುತ್ತಾ ಮರಣಕ್ಕೆ ಫಲವನ್ನು ಹುಟ್ಟಿಸುತ್ತಿದ್ದವು. ಈಗಲಾದರೋ ನಮ್ಮನ್ನು ವಶಮಾಡಿಕೊಂಡಿದ್ದ ಧರ್ಮಶಾಸ್ತ್ರದ ಪಾಲಿಗೆ ನಾವು ಸತ್ತ ಕಾರಣ ಆ ಧರ್ಮಶಾಸ್ತ್ರದಿಂದ ವಿಮುಕ್ತರಾಗಿದ್ದೇವೆ. ಹೀಗಿರಲಾಗಿ ಶಾಸ್ತ್ರದ ಹೊರಗಣ ಅರ್ಥಕ್ಕೆ ಅನುಕೂಲವಾದ ಹಳೇ ರೀತಿಯಲ್ಲಿ ನಾವು ದೇವರನ್ನು ಸೇವಿಸುವವರಲ್ಲ. ಪರಿಶುದ್ಧಾತ್ಮ ಪ್ರೇರಿತವಾದ ಹೊಸ ರೀತಿಯಲ್ಲಿ ಆತನನ್ನು ಸೇವಿಸುವವರಾಗಿದ್ದೇವೆ" (ರೋಮಾಪುರ 7:4-6).*

ಹಳೇ ಒಡಂಬಡಿಕೆಯ ಧರ್ಮಶಾಸ್ತ್ರಕ್ಕೆ ಅಧೀನರಾದವರು ಜನನದಿಂದ ಒಡಂಬಡಿಕೆಯ ಮಕ್ಕಳಾಗುತ್ತಾರೆ; ಅವರು ಧರ್ಮಶಾಸ್ತ್ರದ ಅಧೀನತೆಯಲ್ಲಿ ಹುಟ್ಟಿದವರಾಗಿರುವರು. ಒಡಂಬಡಿಕೆಯು ಅವರಿಗೂ ದೇವರಿಗೂ ಮಧ್ಯದಲ್ಲಿರುವದು. ಒಡಂಬಡಿಕೆಯ ನಿಯಮಗಳಿಗೆ ಅವರು ವಿಧೇಯರಾದರೆ, ಅವರು ಸಮೃದ್ಧರಾಗುವರು, ದೇಶದಲ್ಲಿ ದೀರ್ಘಾಯುಷಿಗಳಾಗುವರು. ಅವರು ಅವಿಧೇಯರಾದರೆ, ಶಿಕ್ಷೆಯ ಪರಿಣಾಮಗಳ ಶ್ರಮೆ ಹೊಂದುವರು ಮತ್ತು ದೇಶದಿಂದ ಹೊರಗೆ ಹಾಕಲ್ಪಡುವರು.

ಧರ್ಮಶಾಸ್ತ್ರವು ಅಗತ್ಯವಾಗಿದೆಯೆಂದು ಸ್ಪಷ್ಟವಾಗಿ ತೋರಿಸಿದ, ಹೊಸ ಒಡಂಬಡಿಕೆಯು ಸಂಪೂರ್ಣವಾಗಿ ಹೊಸದಾದದ್ದೂ ಭಿನ್ನವಾದ ಪದ್ಧತಿಯೂ ಆಗಿತ್ತು. ಹೊಸ ಒಡಂಬಡಿಕೆಯ ಮಕ್ಕಳಾಗಬೇಕಾಗಿದ್ದರೆ, ನಾವು ಹೊಸದಾಗಿ ಹುಟ್ಟತಕ್ಕದ್ದೂ (ಯೋಹಾನ 3:3-5). ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ವಾಗ್ದಾನ ಮಾಡಲ್ಪಟ್ಟ ನಿತ್ಯಜೀವದ, ಪಾರಲೌಕಿಕ ಅಶೀರ್ವಾದದ ನಿರೀಕ್ಷೆ ನಮಗಿರುವ ಮೊದಲು ಇದನ್ನು ಮಾಡತಕ್ಕದ್ದು (1 ಪೇತ್ರ 1:3, 4). ಹೊಸ ಒಡಂಬಡಿಕೆಯು, ನಾವು ಪ್ರೀತಿಯಿಂದ ಸಂತೋಷದಿಂದ ಸೇವೆ ಮಾಡುವದಕ್ಕೆ ಮತ್ತು ಭಯಭಕ್ತಿಯೊಂದಿಗೆ ಹಿಂಬಾಲಿಸಲಿಕ್ಕೆ ನಮಗೊಬ್ಬ ಸ್ನೇಹಿತನನ್ನು ಒದಗಿಸುತ್ತದೆ. ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ನಾವು ಹೃದಯಪೂರ್ವಕವಾಗಿ ಸೇವೆ ಮಾಡುತ್ತೇವೆ. ನಾವು ನಮ್ಮ ಕರ್ತನೂ ರಕ್ಷಕನೂ ಆದ ಯೇಸುವಿಗಾಗಿ ಜೀವಿಸಲು *ಬಯಸುತ್ತೇವೆ.*

ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸುವ ಮೊದಲು ಆತನು ಮಾನವ ಕುಲವನ್ನು ಧರ್ಮಶಾಸ್ತ್ರದ ಮುಖಾಂತರವಾಗಿ ಅಲ್ಲ, ಆದರೆ ಯೇಸುವಿನ ಮುಖಾಂತರ ರಕ್ಷಿಸುವೆನೆಂದು ನಿರ್ಧರಿಸಿ ಕೊಂಡನು (ಅಪೊಸ್ತಲರ ಕೃತ್ಯಗಳು 2:23; 1 ಪೇತ್ರ 1:18-20). ಅಬ್ರಹಾಮನ ಸಂತತಿಯ ಮುಖಾಂತರ ದೇವರು ವಾಗ್ದಾನ ಮಾಡಿದ್ದ

ಆಶೀರ್ವಾದವನ್ನು ಧರ್ಮಶಾಸ್ತ್ರವು ತರಲಿಲ್ಲ (ಆದಿಕಾಂಡ 22:18; ಗಲಾತ್ಯ 3:16). ಅದರ ಬದಲು ಅದು ತನ್ನ ಜನರನ್ನು ಶಾಪದೊಳಗೆ ತಂದಿತು. ಆಜ್ಞಾಪಿಸಲ್ಪಟ್ಟ ಪ್ರತಿಯೊಂದನ್ನೂ ಒಬ್ಬನು ಕೈಕೊಳ್ಳದಿದ್ದರೆ (ಯಾಕೋಬ 2:10), ಅವನು ಶಾಪಗ್ರಸ್ತನು (ಗಲಾತ್ಯ 3:10) ಎಂದು ಧರ್ಮಶಾಸ್ತ್ರವು ಹೇಳಿತು - ಮತ್ತು ಯಾರೂ (ಯೇಸುವನ್ನು ಹೊರತುಪಡಿಸಿ) ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಕೊಳ್ಳಲಿಲ್ಲ.

ಅವನ ಸಂತತಿಯ, ಅಂದರೆ ಯೇಸುವಿನ ಮುಖಾಂತರ ಎಲ್ಲಾ ಜನಾಂಗ ಗಳನ್ನು ಆಶೀರ್ವದಿಸುವೆನೆಂದು ಅಬ್ರಹಾಮನೊಂದಿಗೆ ಮಾಡಿಕೊಂಡ ದೇವರ ಒಡಂಬಡಿಕೆಯನ್ನು ಧರ್ಮಶಾಸ್ತ್ರವು ರದ್ದು ಪಡಿಸಿತೆಂದು ಇದರ ಅರ್ಥವಾಗುವದಿಲ್ಲ. "... ದೇವರು ಮೊದಲು ಸ್ಥಿರಪಡಿಸಿದ ಒಡಂಬಡಿಕೆಯನ್ನು ನಾನೂರು ಮೂವತ್ತು ವರುಷಗಳ ಮೇಲೆ ಬಂದ ಧರ್ಮಶಾಸ್ತ್ರವು ರದ್ದು ಮಾಡಿ ಆ ವಾಗ್ದಾನವನ್ನು ವ್ಯರ್ಥ ಮಾಡುವದಿಲ್ಲ" (ಗಲಾತ್ಯ 3:17) ಎಂದು ಪೌಲನು ವಿವರಿಸಿದನು. ಧರ್ಮಶಾಸ್ತ್ರವು ಆಶೀರ್ವಾದವನ್ನು ತರಲಾಗದಿತ್ತು, ಯಾಕಂದರೆ ಅದು ತನ್ನ ಅಧೀನತೆಯಲ್ಲಿ ಇದ್ದವರನ್ನೆಲ್ಲಾ ಶಪಿಸಿತ್ತು. ಧರ್ಮಶಾಸ್ತ್ರದ ಮುಖಾಂತರ ಇದು ತೆಗೆದು ಹಾಕಲ್ಪಡಲಾಗಲಿಲ್ಲ, ಆದರೆ ಅನಂತರದಲ್ಲಿ ಕ್ರಿಸ್ತನಿಂದ ತೆಗೆದು ಹಾಕಲ್ಪಟ್ಟಿತು, ಕ್ರಿಸ್ತನು ಬಂದಾಗ, ಆತನು "ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು" ಎಂದು ಶಾಸ್ತ್ರದಲ್ಲಿ ಬರೆದಿದೆಯಲ್ಲಾ (ಗಲಾತ್ಯ 3:14). "ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ, ಯಾಕಂದರೆ ಧರ್ಮಶಾಸ್ತ್ರದ ಮುಖಾಂತರ ನೀತಿಯು ಬರುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ" ಎಂದು ಗಲಾತ್ಯ 2:21ರಲ್ಲಿ ಓದುತ್ತೇವೆ.

## ಕ್ರಿಸ್ತನ ನಿಯಮ

ಹಳೇ ಮತ್ತು ಹೊಸ ಒಡಂಬಡಿಕೆಗಳ ಮಧ್ಯದಲ್ಲಿಯ ಭಿನ್ನತೆಯು ನಿಯಮಗಳ ಸ್ವಭಾವದಲ್ಲಿ ಇರುವುದು; ನಿಯಮವಿರುವುದು ಮತ್ತು ನಿಯಮವಿರುವದಿಲ್ಲ ಎಂಬುದರ ಮಧ್ಯದಲ್ಲಿ ಭಿನ್ನತೆ ಇರುವದಿಲ್ಲ. ಮೊದಲನೆಯದು ಹೃದಯಗಳು ಬದಲಾವಣೆಯಾಗದಿದ್ದದರಿಂದ ಕೈಕೊಳ್ಳಬೇಕಾದ ನಿಮಯಗಳ ಒಂದು ಪದ್ಧ ತಿಯಾಗಿತ್ತು. ದೇವರ ಕಟ್ಟಳೆಯು ಅವರ ಹೃದಯಗಳ ಮೇಲೆ ಅವಶ್ಯಕವಾಗಿ ಬರೆದಿರಲಾರದು. ಹೊಸ ಒಡಂಬಡಿಕೆಯ ವಿಧಾನವು ಜನರ ಜೀವನಗಳ ದೈಹಿಕ ಸಂಗತಿಗಳನ್ನು ನಿಯಂತ್ರಿಸುವ ಲಿಖಿತ ಕಟ್ಟಲೆ ಇರುವದಕ್ಕಿಂತ ಹೆಚ್ಚು ದೊಡ್ಡದ್ದಾಗಿದೆ. ಬದಲಾಯಿಸಲ್ಪಟ್ಟ ಬ್ರದುಕನ್ನು ತರಲಿಕ್ಕೆ ಈಗ ನಮಗೆ ನಮ್ಮ ಹೃದಯಗಳ ಮೇಲೆ ಬರೆದ ಕಟ್ಟಳೆ ಇರುತ್ತದೆ. ಕ್ರೈಸ್ತರಂತೆ ನಮಗೆ ನೂತನ ಜೀವವಿದೆ ಯಾಕಂದರೆ ನಮ್ಮ ಆದರ್ಶನಾದ ಕ್ರಿಸ್ತನು ನಮ್ಮ ಹೃದಯಗಳಲ್ಲಿ ಜೀವಿಸುತ್ತಾನೆ ಮತ್ತು ಆಳುತ್ತಾನೆ.

ಯೇಸು ಕ್ರಿಸ್ತನಿಗೆ ಒಂದು ನಿಯಮವಿದೆ. "ಕ್ರಿಸ್ತನ ನಿಯಮವನ್ನು" ನೆರವೇರಿಸುವ ಬಗ್ಗೆ ಪೌಲನು ಬರೆದನು (ಗಲಾತ್ಯ 6:2). ಪೌಲನು ತನ್ನನ್ನು, "... ದೇವರ ನೇಮವಿ ಲ್ಲದವನಲ್ಲ, ಕ್ರಿಸ್ತನ ನಿಯಮಕ್ಕೊಳಗಾದವನೇ ..." ಎಂದು ವಿವರಿಸಿಕೊಂಡಿದ್ದಾನೆ (1 ಕೊರಿಂಥ 9:21).

"ಕ್ರಿಸ್ತನ ನಿಯಮವು," ದೇವರನ್ನು ಮೆಚ್ಚಿಸುವ ಅತ್ಯುತ್ತಮ ಒಳ್ಳೇ ಕಾರ್ಯಗಳ ಮೇಲೆ ಅವಲಂಭಿಸಿರುವ ಸ್ವನೀತಿಯ ನಿಯಮವಲ್ಲ. ಈ ನಿಯಮವು ಕ್ರಿಸ್ತನ

ಕಾರ್ಯಗಳಲ್ಲಿ ನಂಬಿಕೆಯ ಮೇಲೆ ಅವಲಂಭಿಸಿದ್ದಾಗಿದೆ - ಈ ರೀತಿಯ ವಿಶ್ವಾಸವು ಆತನ ವಾಕ್ಯದಲ್ಲಿ ಪ್ರಕಟವಾದಂತೆ ಆತನ ಚಿತ್ತಕ್ಕೆ ವಿಧೇಯರಾಗಲು ನಮ್ಮನ್ನು ಪ್ರೋತ್ಸಾಹಿಸುತ್ತವೆ. ನಾವು ನಮ್ಮ ಸ್ವಂತ ಒಳ್ಳೆಯತನದಿಂದ ಅಲ್ಲ, ಆದರೆ ಆತನಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂಬುದನ್ನು ನಾವು ಅರಿತುಕೊಳ್ಳತಕ್ಕದ್ದು. ಕ್ರಿಸ್ತನ ನಿಯಮವು ಕೃತ್ಯಗಳ ನಿಯಮವಲ್ಲ, ಆದರೆ ನಂಬಿಕೆಯ ನಿಯಮವಾಗಿದೆ. “ಹಾಗಾದರೆ ಹೊಗಳಿಕೊಳ್ಳುವದಕ್ಕೆಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕ್ರಿಯೆಗಳನ್ನು ಅನುಸರಿಸುವದರಿಂದಲೋ? ಅಲ್ಲ; ಆದರೆ ನಂಬಿಕೆಯ ನಿಯಮದಿಂದ. ಧರ್ಮಶಾಸ್ತ್ರದ ಕೃತ್ಯಗಳನ್ನು ಬಿಟ್ಟು ನಂಬಿಕೆಯಿಂದಲೇ ಮನುಷ್ಯನು ನೀತಿವಂತನೆಂದು ಎಣಿಸಲ್ಪಡುವನೆಂದು ನಾವು ನಿಶ್ಚಯ ಮಾಡಿಕೊಂಡಿದ್ದೇವೆ” (ರೋಮಾಪುರ 3:27, 28).

“ನಿಯಮ” ಮತ್ತು “ಧರ್ಮಶಾಸ್ತ್ರ” ಇವುಗಳ ಮಧ್ಯದಲ್ಲಿ ಮಹತ್ವದ ಭಿನ್ನತೆಯಿರುತ್ತದೆ. ಹೆಚ್ಚಾಗಿ ಎಲ್ಲಾ ಭಾಷಾಂತರಗಳು (ಉದಾಹರಣೆಯಾಗಿ KJV, NKJV, NIV, NASB, RSV ಮತ್ತು NRSV) ಗ್ರೀಕಿನಲ್ಲಿ ಯಾವುದೇ ಉಪಪದ ಕಾಣಿಸದಿದ್ದರೂ ರೋಮಾಪುರ 3:31ರಲ್ಲಿ “the” ಎಂಬ ಉಪಪದ ಕೂಡಿಸುತ್ತವೆ. ವಚನವನ್ನು NASB ಹೀಗೆ ಭಾಷಾಂತರಿಸುತ್ತದೆ: “ಹಾಗಾದರೆ ನಂಬಿಕೆಯ ಮುಖಾಂತರ ಧರ್ಮಶಾಸ್ತ್ರವನ್ನು ರದ್ದುಪಡಿಸುತ್ತೇವೆಯೋ? ಹಾಗೆಂದಿಗೂ ಆಗದಿರಲಿ! ಅದಕ್ಕೆ ಬದಲಾಗಿ ನಾವು ಧರ್ಮಶಾಸ್ತ್ರವನ್ನು ದೃಢಪಡಿಸುತ್ತೇವೆ.”

Hugh J. Schonfield ವಚನವನ್ನು ಸರಿಯಾಗಿ ಭಾಷಾಂತರಿಸಿದ್ದಾರೆ: “ನಿಮಯವನ್ನು ನಿರ್ಬಲಪಡಿಸಲು ನಾವು ನಂಬಿಕೆಯನ್ನು ಉಪಯೋಗಿಸುತ್ತಿರುವೆವೋ? ದೇವರು ಅಡ್ಡೀಮಾಡಲಿ! ಆದರೆ ನಾವು ನಿಯಮವನ್ನು ದೃಢಪಡಿಸುತ್ತಿದ್ದೇವೆ”[1] ಇದನ್ನು ವಿವರಿಸುವದಕ್ಕಾಗಿ ಈ ಅಡಿಟಿಪ್ಪಣೆಯನ್ನು ಕೂಡಿಸಿದ್ದಾನೆ: “ನಂಬಿಕೆಯ ನಿಯಮವನ್ನು ಪ್ರಸ್ತಾಪಿಸುವದರಿಂದ.”[2]

Kenneth S. Wuest ಈ ಭಾಷಾಂತರ ಕೊಟ್ಟಿದ್ದಾರೆ: “ಈ ಮೊದಲು ಹೇಳಿದ ನಂಬಿಕೆಯ ಮುಖಾಂತರ ನಿಯಮವನ್ನು ಪರಿಣಾಮವಿಲ್ಲದ್ದನ್ನಾಗಿ ಮಾಡುತ್ತಿರುವವೋ? ಅಂಥ ಸಂಗತಿಯು ಯೋಚಿಸಲ್ಪಡದಿರಲಿ. ನಿಶ್ಚಯವಾಗಿ ನಾವು ನಿಯಮವನ್ನು ಸ್ಥಾಪಿಸುತ್ತೇವೆ.”[3]

ನಂಬಿಕೆಯು ನಿರ್ಬಂಧವಿಲ್ಲದ್ದೂ ತತ್ವವಿಲ್ಲದ್ದೂ ಆಗಿರುವದಿಲ್ಲ, ಆದರೆ ನಿರ್ದಿಷ್ಟವಾದ ತತ್ವಗಳ ಮೇಲೆ ಅವಲಂಭಿಸಿರುತ್ತದೆ. ಈ ಕಾರಣದಿಂದ “ನಂಬಿಕೆಯ ನಿಯಮದ” ಬಗ್ಗೆ ನಾವು ಮಾತಾಡಬಹುದು. ಇದು ಯೇಸುವಿನ ನಿಯಮವಾಗಿದೆ.

“ಯಾಕಂದರೆ ಜೀವವನ್ನುಂಟುಮಾಡುವ ಪರಿಶುದ್ಧಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಮಯದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು” ಎಂದು ಪೌಲನು ಬರೆದನು (ರೋಮಾಪುರ 8:2). ಕ್ರಿಸ್ತನ ನಿಮಯವು ನಂಬಿಕೆಯ ನಿಯಮ ಮತ್ತು ಆತ್ಮನ ನಿಯಮವಾಗಿದೆ. ಅದು “ದೇವರ ನಿಯಮ” ಎಂದೂ ಕರೆಯಲ್ಪಟ್ಟಿದೆ (ರೋಮಾಪುರ 7:22, 25; 1 ಕೊರಿಂಥ 9:21) ಮತ್ತು “ಒಡಂಬಡಿಕೆಯನ್ನುಂಟು ಮಾಡುವ ನಿಯಮ” ಎಂದೂ ಕರೆಯಲ್ಪಟ್ಟಿದೆ (ಯಾಕೋಬ 1:25; 4:12). ಕ್ರಿಸ್ತನು ನಮ್ಮನ್ನು ನಿಯಮದಿಂದ ಬಿಡುಗಡೆ ಮಾಡಲಿಲ್ಲ, ಆದರೆ ನಿಯಮದ ಸ್ವಭಾವವನ್ನು ಬದಲಾಯಿಸಿದನು (ಇಬ್ರಿಯ 7:12).

ನಾವು ಯಾವುದೇ ರೀತಿಯ ನಿಯಮದ ಯಾವುದೇ ರೀತಿಯ ಅಧೀನತೆಯಲ್ಲಿ ಇಲ್ಲದಿದ್ದರೆ, ನಾವು ಪಾಪ ಮಾಡಲಾರೆವು: “ಧರ್ಮಶಾಸ್ತವಿಲ್ಲದ ಪಕ್ಷದಲ್ಲಿ ಮೀರೋಣ

ವೆಂಬದೂ ಇಲ್ಲ" (ರೋಮಾಪುರ 4:15ಬಿ). "ಧರ್ಮಶಾಸ್ತ್ರವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ" (ರೋಮಾಪುರ 5:13ಬಿ). ಇದು ನಿಜವಾಗಿದ್ದರೆ, ಕ್ರಿಸ್ತನು ಅಗತ್ಯತೆಯಿಲ್ಲದೇ ಮರಣಹೊಂದಿದನು; ಯಾಕಂದರೆ ನಮಗೆ ನಿಯಮವು ಇಲ್ಲದಿದ್ದರೆ, ಆಗ ಯೇಸುವಿನ ಮರಣವು ಕ್ಷಮಿಸುವ ಪಾಪವು ನಮಗಿರುತ್ತಿರಲಿಲ್ಲ. ಕ್ರೈಸ್ತರು ನಿಯಮವಿಲ್ಲದವರಲ್ಲ; ಅವರು ಯೇಸುವಿನ ನಿಯಮದ ಅಧೀನತೆಯಲ್ಲಿರುವರು.

## ಪ್ರೀತಿಯ ಒಂದು ನಿಯಮ

ಮೊದಲನೆಯ ಒಡಂಬಡಿಕೆಯು ಇತರರಿಗೆ ಕೆಟ್ಟದ್ದನ್ನು ಮಾಡಬಾರದ ಹಿನ್ನೆಲೆಯಲ್ಲಿ - ಕೊಲ್ಲಬಾರದು, ಸುಳ್ಳು ಹೇಳಬಾರದು, ಕದಿಯ ಬಾರದು ಮತ್ತು ಇನ್ನೊಬ್ಬನ ಹೆಂಡತಿಯೊಂದಿಗೆ ವ್ಯಭಿಚಾರ ಮಾಡಬಾರದು - ರಚಿಸಲ್ಪಟ್ಟಿತು. ಇತರರಿಗೆ ಒಳ್ಳೆ ಯದನ್ನು ಮಾಡುವದರ ಬಗ್ಗೆ ಅದು ಏನನ್ನೂ ಹೇಳಲಿಲ್ಲ (ನೋಡಿರಿ ಯಾಜಕಕಾಂಡ 19:18ಬಿ). "ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತು ಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ" (ಗಲಾತ್ಯ 6:2) ಎಂದು ಕ್ರಿಸ್ತನ ನಿಯಮವು ಹೇಳುತ್ತದೆ. ಇತರರಿಗೆ ಕೇಡು ಮಾಡದಿರುವದನ್ನು ದಾಟಿ ಅದು ಹೋಗುತ್ತದೆ ಮತ್ತು ಇತರರ ಸೇವೆ ಮಾಡುವದನ್ನು ಒತ್ತಿ ಹೇಳುತ್ತದೆ. ಯೇಸುವಿನ ನಿಯಮವು ಹೃದಯದ ಕಡೆಗೆ ನೋಡುತ್ತದೆ, ಅದನ್ನು ದೇವರು ಮಾತ್ರವೇ ನಿರ್ಣಯಿಸ ಬಲ್ಲನು. ಧರ್ಮಶಾಸ್ತ್ರವು ಹೆಚ್ಚಾಗಿ ದೈಹಿಕ ಕೃತ್ಯಗಳ ಕಡೆಗೆ ನೋಡಿತು; ಮೀರುವಿಕೆಗಳು ವಿಚಾರಿಸಲ್ಪಡ ಬೇಕು, ತೀರ್ಪಿಗೊಳಪಡಿಸಲ್ಪಡಬೇಕು ಮತ್ತು ಸಮಾಜದಿಂದ ಶಿಕ್ಷಿಸಲ್ಪಡಬೇಕು (ಯಾಜಕಕಾಂಡ 19:15). ಇತರರಿಗೆ ಕೇವಲ ಕೆಡುಕನ್ನು ಮಾಡದೇ ಉಳಿಯುವದರ ಬದಲು ಇತರರ ಕಡೆಗೆ ಸಕಾರಾತ್ಮಕ ಕೃತ್ಯಗಳನ್ನು ಮಾಡುವದನ್ನು ಕ್ರಿಸ್ತನ ನಿಯಮವು ಒಳಗೊಂಡಿರುತ್ತದೆ. ನಿಯಮಗಳಿಗೆ ಕೇವಲ ಜವಾಬ್ದಾರರಾಗಿರುವದಕ್ಕಿಂತ ಹೆಚ್ಚಾಗಿ ಒಬ್ಬ ವ್ಯಕ್ತಿಯೊಂದಿಗೆ ಈಗ ನಮಗೆ ಸಂಬಂಧವಿರುವುದು ಅತೀ ದೊಡ್ಡ ಭಿನ್ನತೆಯಾಗಿದೆ. ಈಗ ನಾವು ಕಲ್ಲಿನ ಮೇಲೆ ಬರೆದ ಆಜ್ಞೆಗಳ ಕಡೆಗೆ ಕೇವಲ ನೋಡುವದರ ಬದಲು, ನಮ್ಮ ಮಾದರಿಯಾದ ಕ್ರಿಸ್ತನ ಕಡೆಗೆ ನೋಡುತ್ತೇವೆ.

ಕ್ರಿಸ್ತನ ಹೊಸ ಒಡಂಬಡಿಕೆಯು ಹೃದಯದ ಮೇಲೆ ಬರೆಯಲ್ಪಡತಕ್ಕದ್ದು. ಇದು ಯೆರೆಮೀಯನಿಂದ ಪ್ರವಾದಿಸಲ್ಪಟ್ಟಿತು: "ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು: ನನ್ನ ಧರ್ಮೋಪ ದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯ ದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು" (ಯೆರೆಮೀಯ 31:33).

ದೇವರಿಗೆ ಇನ್ನು ಮುಂದೆ ತನ್ನ ಜನರಿಗಾಗಿ ಧರ್ಮಶಾಸ್ತ್ರವಿರುವದಿಲ್ಲ ಎಂದು ಯೆರೆಮೀಯನು ಪ್ರವಾದಿಸಲಿಲ್ಲ. ಆದರೆ ಆತನು ತನ್ನ ಧರ್ಮೋಪದೇಶವನ್ನು ಅದರ ಹೃದಯಗಳ ಮೇಲೆ ಬರೆಯುವನು ಎಂದು ಹೇಳಿದನು. ತನ್ನ ಆಜ್ಞೆಗಳ ಮುಖಾಂತರ ತಿಳಿದು ಕೊಳ್ಳಲ್ಪಡದೇ ದೇವರು ತನ್ನ ಕರುಣೆಯಿಂದ ತಿಳಿಯಲ್ಪಡುವನು. ದೇವರನ್ನು ಜನರು ತಿಳಿದುಕೊಳ್ಳುವ ಮಾರ್ಗವನ್ನು ಪ್ರವಾದಿಯು ವಿವರಿಸಿದನು: "ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" (ಯೆರೆಮೀಯ 31:34ಬಿ). ನಮ್ಮ ಪಾಪಗಳಿಗಾಗಿ ಯೇಸುವಿನ ಯಜ್ಞದ ಮುಖಾಂತರ ದೇವರು ತನ್ನನ್ನು ಕರುಣೆಯ, ಪ್ರೀತಿಯ, ದಯೆಯ ಮತ್ತು ಕೃಪೆಯ ದೇವರು ಎಂದು

ತಿಳಿಯಪಡಿಸಿದ್ದಾನೆ. ಹೊಸ ಒಡಂಬಡಿಕೆಯ ಅಧೀನತೆಯಲ್ಲಿ, ದೇವರು ಯೇಸುವಿನ ಮುಖಾಂತರ ತಿಳಿದುಕೊಳ್ಳಲ್ಪಟ್ಟಿದ್ದಾನೆ. ಈ ಕಾರಣದಿಂದ, ನಾವು ದೇವರನ್ನು ಸೇವಿಸುತ್ತೇವೆ - ಯಾಕಂದರೆ ದೇವರು ತಾನೇ ಯೇಸುವಿನ ಮುಖಾಂತರ ತನ್ನ ಸ್ವಭಾವದ ಆಳವನ್ನು ಪ್ರಕಟಿಸಿದ ರೀತಿಯಲ್ಲಿ ತನ್ನ ಜನರಿಗೆ ಸೇವೆಮಾಡಿದ್ದಾನೆ (ರೋಮಾಪುರ 11:33). ಯೇಸುವಿನ ಮುಖಾಂತರ ಆತನು ತನ್ನನ್ನು ತಿಳಿಯಪಡಿಸಿದ್ದಾನೆ (ಯೋಹಾನ 1:18).

## ಆತ್ಮನ ನವೀನತೆ

ಮೋಶೆಯ ಧರ್ಮಶಾಸ್ತ್ರ ಮತ್ತು ಕ್ರಿಸ್ತನ ನಿಯಮ ಇವುಗಳ ಮಧ್ಯದಲ್ಲಿ ಇನ್ನೊಂದು ಪ್ರಮುಖ ಭಿನ್ನತೆಯು ಪರಿಶುದ್ಧತೆಗಾಗಿರುವ ಉದ್ದೇಶವಾಗಿದೆ. "ಶಾಸ್ತ್ರದ ಹೊರಗಣ ಅರ್ಥಕ್ಕೆ ಅನುಕೂಲವಾದ ಹಳೇ ರೀತಿಯಲ್ಲಿ ನಾವು ದೇವರನ್ನು ಸೇವಿಸುವವರಲ್ಲ. ಪರಿಶುದ್ಧಾತ್ಮ ಪ್ರೇರಿತವಾದ ಹೊಸ ರೀತಿಯಲ್ಲಿ ಆತನನ್ನು ಸೇವಿಸುವವರಾಗಿದ್ದೇವೆ" (ರೋಮಾಪುರ 7:6ಬಿ). "Spirit" ಎಂದು ದೊಡ್ಡ ಅಕ್ಷರದ ಬದಲು KJVಯಲ್ಲಿಯಂಥೆ "newness of spirit" ಎಂದು ಭಾಷಾಂತರಿಸುವುದು ಹೆಚ್ಚು ಉತ್ತಮವಾಗಿರುತ್ತದೆ. ಕ್ರೈಸ್ತನ ಉದ್ದೇಶವು ನಿಯಮವನ್ನು ಕೈಕೊಳ್ಳುವುದು ಮಾತ್ರವೇ ಅಲ್ಲ, ಆದರೆ ಯೇಸುವಿಗಾಗಿ ಪ್ರೀತಿ ಮತ್ತು ಮೆಚ್ಚಿಕೆಯ ಪ್ರೇರೇಪಿಸುವಿಕೆಯ ಮೇಲೆ ಅವಲಂಭಿಸಿರುತ್ತದೆ (ಯೋಹಾನ 14:15, 21, 23).

ಒಬ್ಬ ತಾಯಿಯು ತನ್ನ ಚಿಕ್ಕ ಮಗನಿಗೆ ಅವನ ತಲೆಗೂದಲು ಬಾಚಿಕೊಳ್ಳಲು, ಹಲ್ಲುಗಳನ್ನು ಉಜ್ಜಲು, ಸ್ನಾನಮಾಡಲು ತನ್ನ ತೋರುವಿಕೆ ಬಗ್ಗೆ ಗಮನ ವಹಿಸಲು ಆಜ್ಞಾಪಿಸ ಬಹುದು. ಆದರೆ ಅದಕ್ಕೆ ಪರಿಣಾಮವಾಗದಿರಬಹುದು. ಅದೇ ಬಾಲಕನು ದೊಡ್ಡವನಾದಾಗ ಮತ್ತು ಪ್ರೇಮದಲ್ಲಿ ಸಿಲುಕಿಕೊಳ್ಳುವಾಗ ಯಾವ ಹಿಂಜರಿಯುವಿಕೆಯಿಲ್ಲದೇ ತನ್ನ ತೋರಿಕೆಯ ಬಗ್ಗೆ ಗಮನ ಕೊಡುತ್ತಾನೆ. ಆಜ್ಞೆಗಳಿಗೆ ಕೇವಲ ಒಪ್ಪಿಸಿಕೊಳ್ಳದೆ, ತಾನು ಪ್ರೀತಿಸುವ ವ್ಯಕ್ತಿಯ ಅಪೇಕ್ಷೆಗಳಿಗೆ ಉತ್ತರ ಕೊಡಲು ಪ್ರಾರಂಭಿಸುವನು. ಈ ರೀತಿಯಲ್ಲಿ ಅವನು ಬದಲಾಗಿರುವನು.

ಪೌಲನಿಗೆ ಸಂಭವಿಸಿದ್ದು ಇದೇ. ಅವನು ಕ್ರಿಸ್ತನ ಕಡೆಗೆ ತಿರುಗಿಕೊಂಡಾಗ, ಧರ್ಮಶಾಸ್ತ್ರದಲ್ಲಿ ಕಂಡು ಬಂದ ನೀತಿಯನ್ನು ಅವನು ಹುಡುಕಲಿಲ್ಲ. ಅದರ ಬದಲು ಯೇಸುವನ್ನು ಮೆಚ್ಚಿಸುವದಕ್ಕಾಗಿ ಆತನ ಜ್ಞಾನವನ್ನು ಪಡೆದು ಕೊಳ್ಳುವದನ್ನು ಹುಡುಕಿದನು (ಫಿಲಿಪ್ಪಿ 3:7-14). ತನಗಾಗಿ ಯೇಸುವಿನ ಸೇವೆಯ ತನ್ನ ಮೆಚ್ಚಿಗೆಯ ಕಾರಣದಿಂದಲೂ (ಗಲಾತ್ಯ 2:20) ಹಾಗೂ ಆತನೊಂದಿಗೆ ತನ್ನ ಸಂಬಂಧದ ಕಾರಣದಿಂದಲೂ ಅವನು ಯೇಸುವಿನೊಂದಿಗೆ ಶಿಲುಬೆಗೆ ಹಾಕಿಸಿಕೊಂಡನು. ನಾವು ಬಾಪ್ತಿಸ್ಮ ಹೊಂದಿದಾಗ ಈ ಮಾರ್ಪಾಟು ಆಗುತ್ತದೆ.

> ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ

ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ (ರೋಮಾಪುರ 6:4-6).

## ಅನುಸರಿಸಲು ಒಂದು ಉದಾಹರಣೆ

ಹೊಸ ಒಡಂಬಡಿಕೆಯ ಅಧೀನತೆಯಲ್ಲಿ, ನಮ್ಮ ಗುರಿಯು ಯೇಸುವಿನ ಆಜ್ಞೆಗಳನ್ನು ಕೈಕೊಳ್ಳುವುದು ಮಾತ್ರವಲ್ಲದೇ, ಯೇಸುವಿನಂತೆ ಆಗುವುದೂ ಆಗಿದೆ. "ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ. ... ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ" (1 ಯೋಹಾನ 2:3-6). ನಾವು ಯೇಸುವಿನ ಆಜ್ಞೆಗಳನ್ನು ಕೈಕೊಂಡು, ಆತನು ನಡೆದಂತೆ ನಡೆದರೆ ಆಗ ನಾವು ಯೇಸುವನ್ನು ತಿಳಿದುಕೊಳ್ಳುವೆವು.

ಯೇಸುವು ತಾನೇ ನಾವು ಹೇಗೆ ಜೀವಿಸಬೇಕು ಎನ್ನುವದಕ್ಕೆ ಒಂದು ಉದಾಹರಣೆಯಾಗಿದ್ದಾನೆ. "ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯ ಬೇಕೆಂದು ಮಾದರಿಯನ್ನು ತೋರಿಸಿ ಹೋದನು" (1 ಪೇತ್ರ 2:21). ಆತನ ಮರಣವೂ ಸಹ ಇತರರಿಗಾಗಿ ಸೇವೆಯ ಒಂದು ಉದಾಹರಣೆಯಾಗಿದೆ. "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ" (1 ಯೋಹಾನ 3:16).

ಜೀವನದ ಪ್ರತಿಯೊಂದು ವಿಷಯದಲ್ಲಿ ಕ್ರಿಸ್ತನಲ್ಲಿ ಬೆಳೆಯುವುದೇ ಕ್ರೈಸ್ತ ಗುರಿಯಾಗಿದೆ. ಈ ರೀತಿಯಲ್ಲಿ ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯಿಂದ ಭಿನ್ನವಾದದ್ದಾಗಿದೆ. ಅದರ ಗುರಿಯು ಆಜ್ಞೆಯನ್ನು ಕೈಕೊಳ್ಳುವುದು ಮಾತ್ರವೇ ಅಲ್ಲ, ಕ್ರಿಸ್ತನನ್ನು ಅನುಕರಿಸುವುದೂ ಆಗಿದೆ (ನೋಡಿರಿ ಫಿಲಿಪ್ಪಿ 2:5).

## ಮುಕ್ತಾಯ

ಕ್ರಿಸ್ತನ ನಿಯಮವು, ಹೊಸ ನಿಯಮದಂತೆ, ಯೇಸುವಿನ ಜೀವಿತದ ಮಾದರಿಯಲ್ಲಿಯ ಸೇವೆಯ ನೂತನ ರೀತಿಯನ್ನು ಕೇಳುತ್ತದೆ. ಆತನಿಗಾಗಿ ನಮ್ಮ ಪ್ರೀತಿಯ ಮತ್ತು ಸಂಬಂಧದ ಕಾರಣದಿಂದ, ಆತನನ್ನು ಮೆಚ್ಚಿಸಲು ನಾವು ಬಯಸುತ್ತೇವೆ. ನಿಯಮದ ಬೇಡಿಕೆಯ ಕಾರಣದಿಂದ ಮಾತ್ರವೇ ನಾವು ವಿಧೇಯರಾಗಿರಬೇಕಾಗಿಲ್ಲ, ಆದರೆ ಯೇಸುವಿನ ಉದಾಹರಣೆಯನ್ನು ಅನುಸರಿಸಿ ಆತನಿಗೆ ಸೇವೆಮಾಡಲು ನಮ್ಮ ಬದಲಾದ ಹೃದಯಗಳು ಬಯಸುವದರಿಂದ ಹಾಗೆ ಮಾಡುತ್ತೇವೆ.

ಹಳೇ ರೀತಿಯಲ್ಲಿ ನಾವು ದೇವರನ್ನ ಸೇವಿಸುವವರಾಗಿರದೇ, ಪರಿಶುದ್ಧಾತ್ಮ ಪ್ರೇರಿತವಾದ ಹೊಸ ರೀತಿಯಲ್ಲಿ ಸೇವೆ ಮಾಡೋಣ.

ಟಿಪ್ಪಣಿಗಳು

[1]Hugh J. Schonfield, ed. and trans., *The Authentic New Testament* (New York: Mentor Book, 1958), 301. [2]Ibid., footnote 203. [3]Kenneth S. Wuest, *Romans in the Greek New Testament,* Word Studies in the Greek New Testament (Grand Rapids, Mich.: Wm. B. Eerdmans Publishing Co., 1955), 64.

© 2009 Truth for Today